and if so to what extent, you have said 'some have died. 474'. Is it not a fact that almost all the cattle in this Gulbarga District, either perished or the people have sold them and that there is absolutely no cattle in Gulbarga District ? What steps Government are taking in this regard ?

† SRI N. CHIKKE GOWDA.—It is not true to say that almost all the cattle have perished. It is a fact that some of the farmers sold the unproductive elements to the vatious agencies and some of the cattle were driven to the forest area for grazing. Some were kept in Gulbarga District, for being given treatment.

SRI PRABHAKAR TELKAR.—Sir, in reply to (c), four reasons are given and in reply to (d) it is said that a sum of Rs. 15 lakhs was placed at the disposal of the Deputy Commissioner, Gulbarga for being granted as loans to the agriculturists for purchase of bullocks. Will you kindly tell me how much of this amount of 15 lakhs of rupees placed at the disposal of the Deputy Commissioner, has been given for the purchase of cattle and how much amount remains with the Deputy Commissioner, still to be distributed ?

SRI N. CHIKKE GOWDA.—I want notice.

ಶ್ರೀ ಕೆ. ಎಜ್. ಹನುಮೇಗೌಡ.—ಸ್ವಾಮಿ ಉಚಿತ ಮೊಟ್ಟೆಗಳನ್ನು ಹಂಚುವುದಕ್ಕಾಗಿ ೭೨,೬೬೪ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಎಂದು ಹೇಳಿದ್ದೀರಿ ಅವುಗಳನ್ನು ಹೇಗೆ ಹಂಚಿದ್ದಾರೆ ಅವು ನಿಜವಾಗಿ ಬಡಪಾಯಿಗಳಿಗೆ ತಲುಪಿವೆಯೇ ಇಲ್ಲವೇ ಎಂಬುದನ್ನು ವಿಚಾರಿಸಿ ಮಾಡಿದ್ದೀರಾ ?

ಶ್ರೀ ಎನ್ ಚಿಕ್ಕೇಗೌಡ.—ಸ್ಕೇರಿಸಿಟಿ ಕೆಲಸಕ್ಕೆ ಸಂಬಂಧಪಟ್ಟಹಾಗೆ ಪ್ರಾಜೆಕ್ಟ್‌ಗಳು ಮತ್ತು ರಸ್ತೆಗಳ ಕೆಲಸವನ್ನು ಮಾಡುವಾಗ ಮೊಟ್ಟೆಗಳನ್ನು ಬೇಯಿಸಿ ಜನರಿಗೆ ಹಂಚಿದೆ. ಮೊಟ್ಟೆಗಳನ್ನು ಬೇಯಿಸಿದ ಮೇಲೆ ಅವುಗಳನ್ನು ತಿನ್ನಲೇ ಬೇಕು, ಅವುಗಳನ್ನು ಜನಗಳಿಗೆ ಹಂಚಿದೆ. ಅವು ದುರುಪಯೋಗವಾಗಿಲ್ಲ. ಮಾನ್ಯ ಸದಸ್ಯರಿಗೆ ಮೊಟ್ಟೆಗಳನ್ನು ದನಗಳಿಗೆ ಎತ್ತುಗಳಿಗೆ ತಿನ್ನಿಸುವುದು ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ರೈತರು ದನಗಳಿಗೆ ಮೊಟ್ಟೆಗಳನ್ನು ತಿನ್ನಿಸುವುದನ್ನು ನಾನು ನೋಡಿದೆ ನೆ.

SRI PRABHAKAR TELKAR.—Will you just kindly tell me whether or not the Deputy Commissioner has passed orders not to distribute this amount of Rs 15 lakhs on account of financial stringency ? Will the Government order release of this amount to the agriculturists to purchase cattle because every farmer is feeling great difficulty in purchasing cattle and carrying on his agricultural operations ?

SRI N. CHIKKE GOWDA.—I have already stated that I have no information regarding distribution of Rs 15 lakhs. I have to check up the information given by the Hon Member that the Deputy Commissioner or the State Government has given instructions not to give loans and then only I will be in a posstion to say anything. Taking note of this suggestion, Government will certainly consider it.

* *Licence to private operators plying between Bangalore and Kunigal*

11 SRI BETTASWAMY GOWDA (Kudur).—

Will the Minister for Transport and Housing be pleased to state :—

(a) the number of private buses running from Bangalore to Kunigal through Magadi via Gudemaranahalli ;

(b) the amount realised by way of taxes per annum to the Government from the said Private Bus Operators ?

SRI K. H. RANGANATH (Minister for Transport and Housing).—

(a) No licence has been granted to any bus operators to ply from Bangalore to Kunigal via Gudemaranahalli.

(b) This Question does not arise in view of reply to clause (a) above.

ಶ್ರೀ ಬೆಟ್ಟಸ್ವಾಮಿಗೌಡ.— ಸ್ವಾಮೀ ನಾನು ನನ್ನ ಪ್ರಶ್ನೆಯಲ್ಲಿ ಬೆಂಗಳೂರಿನಿಂದ ಮಾಗಡಿ ಮೂಲಕ ಕುಣಿಗಲ್‌ಗೆ ಮತ್ತು ಗುಡೇಮಾರನಹಳ್ಳಿಯ ಮಾರ್ಗವಾಗಿ ಓಡುತ್ತಿರುವ ಖಾಸಗೀ ಬಸ್‌ಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ ಬೆಂಗಳೂರಿನಿಂದ ಗುಡೇಮಾರನಹಳ್ಳಿ ಮಾರ್ಗವಾಗಿ ಕುಣಿಗಲ್‌ಗೆ ಓಡಾಡುವಂತೆ ಯಾವ ಬಸ್ಸುಗಳಿಗೂ ಪರವಾಸೆ ಕೊಟ್ಟಿಲ್ಲ ಎಂದು ಹೇಳಿದ್ದೀರಿ ಇದಕ್ಕೂ ನಾನು ಕೇಳಿರುವ ಪ್ರಶ್ನೆಗೂ ಯಾವ ವಿಧವಾದ ಸಂಬಂಧವೂ ಇಲ್ಲ.

† ಶ್ರೀ ಕೆ. ಎಚ್. ರಂಗನಾಥ.— ಸಂಬಂಧ ಇದೆ, ಬೆಂಗಳೂರಿನಿಂದ ಕುಣಿಗಲ್‌ಗೆ ಗುಡೇಮಾರನಹಳ್ಳಿಯ ಮಾರ್ಗವಾಗಿ ಬಸ್ಸನ್ನು ಓಡಿಸಲು ಯಾವ ಪರ್ಮಿಟ್ಟನ್ನೂ ಕೊಟ್ಟಿಲ್ಲ.

ಶ್ರೀ ಬೆಟ್ಟಸ್ವಾಮಿಗೌಡ.— ಆದರೆ ಖಾಸಗಿ ಬಸ್ಸುಗಳು ಬೆಂಗಳೂರಿನಿಂದ ಮಾಗಡಿ ಮೂಲಕ ಕುಣಿಗಲ್‌ಗೆ ಮತ್ತು ಗುಡೇಮಾರನಹಳ್ಳಿಯ ಮಾರ್ಗವಾಗಿ ಓಡುತ್ತಿವೆ. ಆ ಬಸ್ಸುಗಳ ಸಂಖ್ಯೆ ಎಷ್ಟು ಮತ್ತು ಈ ಖಾಸಗೀ ಬಸ್ಸುಗಳಿಂದ ಒಂದು ವರ್ಷಕ್ಕೆ ಸರ್ಕಾರಕ್ಕೆ ಎಷ್ಟು ಟ್ಯಾಕ್ಸ್ ಬರುತ್ತದೆ ಎಂದು ನಾನು ಪ್ರಶ್ನೆ ಕೇಳಿದ್ದೇನೆ. ಅದ್ದರಿಂದ ನನ್ನ ಪ್ರಶ್ನೆಗೆ ಸರ್ಕಾರದಿಂದ ಸಮಂಜಸವಾದ ಉತ್ತರ ಬಂದಿಲ್ಲ.

SRI. K. H, RANGANATHA.— No. permit is given to ply the buses between Bangalore and Kunigal through Magadi via Gudemarna tal halli.

ಶ್ರೀ ಬೆಟ್ಟಸ್ವಾಮಿಗೌಡ.— ಬೆಂಗಳೂರಿಂದ ಕುಣಿಗೆಲ್‌ಗೆ ಛಾಗಡಿ ಮತ್ತು ಗುಡೇಮಾರನಹಳ್ಳಿ ಮಾರ್ಗವಾಗಿ ಕೆಲವು ಖಾಸಗಿ ಬಸ್ಸುಗಳು ಓಡಾಡುತ್ತಿವೆ ಆರೀತಿ ಆ ಖಾಸಗಿ ಬಸ್ಸುಗಳು ಓಡಾಡುವುದಕ್ಕೆ ಸರ್ಕಾರದವರು ಪರ್ಮಿಟ್ ಕೊಟ್ಟಿದ್ದಾರೆ. ಅದೇನು ಆಕ್ರಮದಲ್ಲ ಆದರೆ ಆ ಖಾಸಗಿ ಬಿಸ್ಸುಗಳಿಂದ ಎಷ್ಟು ಟ್ಯಾಕ್ಸ್‌ಅನ್ನು ಕಲೆಕ್ಟ್ ಮಾಡುತ್ತಿದ್ದೀರಿ?

ಶ್ರೀ ಕೆ. ಎಚ್. ರಂಗನಾಥ.— ಗುಡೇಮಾರನಹಳ್ಳಿ ಮಾರ್ಗವಾಗಿ ಕೆಲವು ಬಸ್ಸುಗಳು ಬರುತ್ತಿವೆ ಆ ಸಮಾಚಾರ ನನ್ನಲ್ಲಿ ಇದೆ. ಆದರೆ ಮಾನ್ಯ ಸದಸ್ಯರು ಕೇಳಿರುವುದು ಬೆಂಗಳೂರಿನಿಂದ ಕುಣಿಗಲ್‌ಗೆ ಗುಡೇಮಾರನಹಳ್ಳಿ ಮಾರ್ಗವಾಗಿ ಬಸ್ಸುಗಳನ್ನು ಓಡಿಸಲು ಪರ್ಮಿಟ್ ಕೊಟ್ಟಿದ್ದೀರಾ ಎಂದು ಕೇಳಿದ್ದಾರೆ ಅದಕ್ಕೆ ನಾನು ಇಲ್ಲ ಎಂದು ಹೇಳಿದ್ದೇನೆ.

ಶ್ರೀ ಬೆಟ್ಟಸ್ವಾಮಿಗೌಡ.— ಈ ಬಾಗದಲ್ಲಿ ಸರ್ಕಾರೀ ಬಸ್‌ಗಳು ಓಡಾಡುತ್ತಿಲ್ಲ, ಅದರೆ ಬೇಕಾದಷ್ಟು ಖಾಸಗಿ ಬಸ್‌ಗಳು ಓಡಾಡುತ್ತಿವೆ. ಆದಕಾರಣ ಈ ಖಾಸಗೀ ಬಸ್‌ಗಳ ಸಂಖ್ಯೆ ಎಷ್ಟು? ಮತ್ತು ಈ ಬಸ್‌ಗಳಿಂದ ತೆರಿಗೆ ಮೂಲಕ ಸಂದಾಯವಾಗುವ ಹಣವೆಷ್ಟು ಎಂಬುದನ್ನು ಹೇಳುತ್ತೀರಾ?

ಅಧ್ಯಕ್ಷರು.— ಖಾಸಗಿ ಬಸ್‌ಗಳು ಆ ಮಾರ್ಗಗಳಲ್ಲಿ ಓಡಾಡುವುದಕ್ಕೆ ಪರ್ಮಿಟ್ ಕೊಟ್ಟಿಲ್ಲ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.— ಪರ್ಮಿಟ್ ಇಲ್ಲದೆ ಓಡಾಡುತ್ತಿರುವ ಬಸ್‌ಗಳ ಸಂಖ್ಯೆಯನ್ನು ಹೇಳುತ್ತಾರೆಯೇ?

ಶ್ರೀ ಕೆ. ಎಚ್. ರಂಗನಾಥ.—ಪರ್ಮಿಟ್ ಇಲ್ಲದೆ ಓಡಾಡುವ ಬಸ್‌ಗಳ ಸಂಖ್ಯೆ ನನ್ನ ಹತ್ತಿರ ಇಲ್ಲ.

ಶ್ರೀ ಕೆ. ಎಂ. ನಾಗಣ್ಣ.— ಈಗ ಬೆಂಗಳೂರಿನಿಂದ ಮಾಗಡಿವರೆಗೆ ಬೇಕಾದಷ್ಟು ಖಾಸಗಿ ಬಸ್‌ಗಳು ಓಡಾಡುತ್ತಿವೆ. ಆದನ್ನು ತಾವು ಒಪ್ಪಿಕೊಳ್ಳುತ್ತಿರಾ ಎಂದು ನಾನು ಬಾವಿಸುತ್ತೇನೆ. ಅದೇ ರೀತಿ ಅಲ್ಲಿಂದ ಮುಂದಕ್ಕೆ ಕುಣಿಗಲ್‌ವರೆಗೆ ಎಷ್ಟು ಬಸ್‌ಗಳು ಓಡಾಡುತ್ತಿವೆ ಎಂಬುದನ್ನು ಹೇಳುತ್ತೀರಾ?

SRI. K. H. RANGANATHA.— The route between Bangalore to Kunigal, via Magadi and Gudemaranahalli is a specific route. The question pertains to that route. I have said that no permit has been given in that route.

ಶ್ರೀ ಬೆಟ್ಟಸ್ವಾಮಿಗೌಡ.— ಈಗ ಬೇಕಾದಷ್ಟು ಬಸ್ಸುಗಳು ಓಡಾಡುತ್ತಿವೆ.

ಅಧ್ಯಕ್ಷರು.— ಅಂದರೆ ಓಡಾಡುವುದು ಬೇಡ ನಿಲ್ಲಿಸಬೇಕು ಎಂದು ತಾವು ಹೇಳುತ್ತೀರಾ?

ಶ್ರೀ ಬೆಟ್ಟಸ್ವಾಮಿಗೌಡ.—ನಿಲ್ಲಿಸಬೇಕೆಂದು ನಾನು ಹೇಳುತ್ತಿಲ್ಲ: ಆದರೆ ಆ ಬಸ್‌ಗಳು ಓಡಾಡುವ ರಸ್ತೆಯ ಸರಿಯಾಗಿಲ್ಲ, ಸರ್ಕಾರಕ್ಕೆ ಬೇಕಾದಷ್ಟು-ಆದಾಯ ಇದ್ದರೂ ಸರಿಮಾಡಿಸಿಲ್ಲ, ರಸ್ತೆಯ ಒಂದುಕಡೆ ಗುಂಡಿ ಬಿದ್ದಿದೆ: ಅವನ್ನು ಸಹ ಮುಚ್ಚಿಸಿಲ್ಲ, ಏತಕ್ಕೆ ಸರಿ ಮಾಡಿಸಲಿಲ್ಲವೆಂದು ನಾನು ಹೇಳಂತ್ತಿರುವುದು

ಅಧ್ಯಕ್ಷರು.— ಮಾನ್ಯ ಸದಸ್ಯರು ದಯವಿಟ್ಟು ಮಾನ್ಯ ಚೆನ್ನಬಸಪ್ಪನವಂಗೆ ಕಾಗದ ಬರೆದಂ ತಿಳಿಸಬೇಕು.

**Water Supply Scheme in Indi Taluk*

110. SRI J. L. KABADE (Ballolli).— Will the Minister for Health be pleased to state.—

(*a*) the villages of Indi taluk where Rural Drinking Water Supply Scheme has been taken up,

(*b*) whether representations have been received from the Panchayats and Public of Chadachan, Indi, Loni, B.K. Tadavulga, Atharga, Harti, Halasani, Bathagunaki and Nimbala villages for taking up the Drinking Water Scheme, if so, the action taken in this behalf.

(*c*) if the schemes have been taken up which are the villages wherein the work is started and the amount spent by the Government,

(*d*) the reasons for not completing the Drinking Water Supply Scheme at Chadchan,

(*e*) the action taken regarding the Drinking Water Scheme in the said village?

SRI H. SIDDAVEERAPPA (Minister for Health).—

(*a*) National Rural Water Supply Schemes have been taken up at Indi and Chadchan.

(*b*) Requests have been received by the Executive Engineer, P.H.E. division, Bijapur from all the villages mentioned above except